ದಯಮಾಡಿ ಈಗಲಾದರೂ ನಿಟ್ಟೂರಿನಲ್ಲಿ ಪೋಲೀಸ್ ಠಾಣೆ ತೆರೆಯುವ ಬಗ್ಗೆ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಗುಬ್ಬಿ, ಚೇಳೂರು ಮತ್ತು ಚಂದ್ರ ಶೇಖರಪುರಗಳಲ್ಲಿ ಪೋಲೀಸ್ ಠಾಣೆಗಳಿವೆ. ತಮ್ಮ ಮತಕ್ಷೇತ್ರದ ವ್ಯಾಪ್ತಿಗೆ ಸೇರುವ ಬೆಳ್ಳಾವಿಯಲ್ಲೂ ಸಹ 1993-94ನೇ ಸಾಲಿನಲ್ಲಿ ಒಂದು ಪೋಲೀಸ್ ಠಾಣೆಯನ್ನು ತೆರೆಯುತ್ತಿದ್ದೇವೆ. ತಮಗೆ ಹೇಳಿದ ಪ್ರಕಾರ 1992-93ನೇ ಸಾಲಿನಲ್ಲಿ ಇಡೀ ಕರ್ನಾಟಕ ರಾಜ್ಯದಲ್ಲಿ 15 ಪೋಲೀಸ್ ಠಾಣೆಗಳನ್ನು ಮಂಜೂರು ಮಾಡಿದ್ದೇವೆ. ಅಲ್ಲದೆ, 1993-94ನೇ ಸಾಲಿನ ಬಜೆಟ್‌ನಲ್ಲಿ ಕಾಣಿಸಿರುವಂತೆ 15 ಪೋಲೀಸ್ ಠಾಣೆಗಳನ್ನು ಮಂಜೂರು ಮಾಡಲಾಗಿದ್ದು, ಒಟ್ಟು 30 ಪೋಲೀಸ್ ಠಾಣೆಗಳನ್ನು ಸ್ಥಾಪಿಸುವುದಕ್ಕೆ 15 ದಿವಸಗಳ ಹಿಂದೆ ನಾವು ಒಂದು ನಿರ್ಣಯ ತೆಗೆದುಕೊಂಡಿದ್ದೇವೆ. ಅದರಲ್ಲಿ ತಮ್ಮ ಕ್ಷೇತ್ರದ ಪೋಲೀಸ್ ಸ್ಟೇಷನ್ ಬರಲಿಲ್ಲ. ಏಕೆಂದರೆ, ಕೆಲವು ಸಲ ಟೆರಿಟೋರಿಯಲ್ ಡಿವಿಜನ್ ಮತ್ತು ಅವಶ್ಯಕತೆಗೆ ಹೊಂದಿಕೊಂಡು ಮಾಡಿದ್ದೇವೆ. ಬಹುಶಃ ನಮ್ಮ ವರದಿ ಪ್ರಕಾರ ನಿಟ್ಟೂರಿನ ಆದ್ಯತೆ ಸ್ವಲ್ಪ ಹಿಂದೆ ಹೋಗಿರಬಹುದು. ನಾನು ಪುನಃ ಅದನ್ನು ತರಿಸಿ ನೋಡುತ್ತೇನೆ. ರಾಜ್ಯಕ್ಕೆ ಈಗಾಗಲೇ ಸಾಕಷ್ಟು ಹಣದ ಹೊರೆ ಜಾಸ್ತಿಯಾಗಿದೆ. ಆದರೆ ಇದು ಅತ್ಯವಶ್ಯಕವೆಂದು ಕೆಂಡುಬಂದರೆ ಇದನ್ನು ಮೆರಿಟ್‌ಗೆ ಅಳವಡಿಸಿಕೊಂಡು ತಮ್ಮ ಜೊತೆ ಚರ್ಚೆಮಾಡಿ ಮಂಜೂರಾತಿ ಮಾಡುವಂತಿದ್ದರೆ ತಕ್ಷಣ ಮಾಡಿಕೊಡುತ್ತೇವೆ.

ಅಧ್ಯಕ್ಷರು :- ಮಾನ್ಯ ಪರಿಸರ ಮಾಲಿನ್ಯ ನಿಯಂತ್ರಣ ಇಲಾಖೆಯ ಮಂತ್ರಿಗಳು ಸದನದಲ್ಲಿಲ್ಲವಾದ ಕಾರಣ ಅನಂತರ ಚುಪ್ರ 1752 ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಚುಪ್ರ1399 ಕ್ಕೆ 15 ದಿನಗಳ ಕಾಲಾವಕಾಶ ಕೇಳಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಅಧ್ಯಕ್ಷರೆ, ಚುಪ್ರ 1429 ನ್ನು ಸ್ವಲ್ಪಕಾಲ ಮುಂದೂಡಿ ಅನಂತರ ತೆಗೆದುಕೊಳ್ಳೋಣ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಕಾಲಾವಕಾಶವನ್ನು ಕೇಳಿರುವುದರಿಂದ ಈ ಪ್ರಶ್ನೆಯನ್ನು ಅನಂತರ ತೆಗೆದುಕೊಳ್ಳುತ್ತೇನೆ.

ಪಾಂಡವಪುರ ತಾಲ್ಲೂಕಿನ ಹಳ್ಳಿಗಳ ಆರಕ್ಷಕ ಠಾಣೆಗಳು.

22 (1743) ಶ್ರೀ ಡಿ. ಹಲಗೇ ಗೌಡ (ಪಾಂಡವಪುರ): ಮಾನ್ಯ ಮುಖ್ಯ ಮಂತ್ರಿಗಳು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :-

ಅ) ಪಾಂಡವಪುರ ತಾಲ್ಲೂಕಿನ ಹಳ್ಳಿಗಳನ್ನು ಎಷ್ಟು ಆರಕ್ಷಕ ಠಾಣೆಗಳು ಮತ್ತು ವೃತ್ತಗಳ ಅಧೀನಕ್ಕೆ ಒಳಪಡಿಸಲಾಗಿದೆಯೆ ?

ಆ) ಪಾಂಡವಪುರ ತಾಲ್ಲೂಕಿನ ಎಲ್ಲಾ ಹಳ್ಳಿಗಳನ್ನು ಒಂದೇ ವೃತ್ತದ ಅಧೀನಕ್ಕೆ ಒಪ್ಪಿಸಲಾಗುವುದೇ ?

ಇ) ಆದುದರಿಂದ ಪಾಂಡವಪುರದಲ್ಲಿ ಒಂದು ಪೂರ್ಣ ಮಟ್ಟದ ವೃತ್ತ ಅಧೀಕ್ಷಕರ ರಕ್ಷಣಾ ಠಾಣೆಯನ್ನು ನಿಯೋಜಿಸಲಾಗುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) 1) ಪಾಂಡವಪುರ ತಾಲ್ಲೂಕಿನಲ್ಲಿ 171 ಹಳ್ಳಿಗಳಿವೆ. ಇವುಗಳಲ್ಲಿ 140 ಹಳ್ಳಿಗಳನ್ನು ಪಾಂಡವಪುರ ಪೋಲೀಸ್ ಠಾಣೆಗೂ 18 ಹಳ್ಳಿಗಳನ್ನು ಕೆ. ಆರ್. ಸಾಗರ ಪೋಲಿಸ್ ಠಾಣೆಗೂ ಮತ್ತು 13 ಹಳ್ಳಿಗಳನ್ನು ಶ್ರೀರಂಗಪಟ್ಟಣ ಪೋಲಿಸ್ ಠಾಣೆಗೂ ಸೇರಿಸಲಾಗಿದೆ.

2) ಪಾಂಡವಪುರ ತಾಲ್ಲೂಕಿನ ಈ 171 ಹಳ್ಳಿಗಳು ಶ್ರೀರಂಗಪಟ್ಟಣ ಪೋಲೀಸ್ ವೃತ್ತದ ವ್ಯಾಪ್ತಿಗೆ ಬರುತ್ತವೆ. ಒಂದೇ ವೃತ್ತದ ಅಧಿನಕ್ಕೆ ಒಳಪಡಿಸಿದೆ.

ಆ) ಈಗಾಗಲೇ ಪಾಂಡವಪುರ ಠಾಣೆಗೆ ಒಬ್ಬ ಇನ್ಸ್‌ಪೆಕ್ಟರ್ ರನ್ನು ಹಾಕಲಾಗಿದೆ. ಆದುದರಿಂದ ಅದನ್ನು ಒಂದು ವೃತ್ತವಾಗಿ ಮಾಡುವ ಅವಶ್ಯಕತೆ ಇರುವುದಿಲ್ಲ.

ಶ್ರೀ ಡಿ. ಹಲಗೇಗೌಡ :- ಮಾನ್ಯ ಅಧ್ಯಕ್ಷರೆ, ಪಾಂಡವಪುರ ತಾಲೂಕಿನಲ್ಲ ಒಟ್ಟು 171 ಹಳ್ಳಿಗಳಿವೆ ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅದರಲ್ಲಿ 140 ಹಳ್ಳಿಗಳನ್ನು ಒಂದು ಪೋಲಿಸ್ ಸ್ಟೇಷನ್ ವ್ಯಾಪ್ತಿಗೂ, 18 ಹಳ್ಳಿಗಳನ್ನು ಒಂದು ಪೋಲಿಸ್ ಸ್ಟೇಶನ್ ವ್ಯಾಪ್ತಿಗೂ ಮತ್ತು 13 ಹಳ್ಳಿಗಳನ್ನು ಮತ್ತೊಂದು ಪೋಲಿಸ್ ಸ್ಟೇಷನ್ ವ್ಯಾಪ್ತಿಗೂ ಸೇರಿಸಲ್‌ಪಟ್ಟಿವೆ ಎಂದು ಉತ್ತರ ಕೊಟ್ಟಿದ್ದಾರೆ. ಇದು ತಾಲೂಕು ಕೇಂದ್ರ ವಾಗಿರುವುದರಿಂದ ಮತ್ತು ಉಪ ವಿಭಾಗ ಕೇಂದ್ರ ವಾಗಿರುವುದರಿಂದ ಬೇರೆ ತಾಲ್ಲೂಕುಗಳಲ್ಲಿ ಉಪ ನಿರೀಕ್ಷಕರ ಕಛೇರಿ ಇರುವಂತಯೇ ನಮ್ಮ ಪಾಂಡುಪುರದಲ್ಲೂ ಒಂದು ಸ್ವತಂತ್ರ ಸ್ವತಂತ್ರ ವೃತ್ತವನ್ನು ಏತಕ್ಕೆ ಮಾಡಬಾರದು ? ಇದನ್ನು ಮಾಡದೇ ಇರುವುದರಿಂದ ನಮಗೆ ಸಾಕಷ್ಟು ತೊಂದರೆಯಾಗಿದೆ. ಈಗಾಗಲೇ ಅಲ್ಲಿಗೆ ಒಬ್ಬ ವೃತ್ತ ನಿರೀಕ್ಷಕನನ್ನು ಹಾಕಿದ್ದೇವೆ ಎಂದು ಹೇಳಿದ್ದೀರಿ. ಆದರೆ ಆ ವೃತ್ತ ನಿರೀಕ್ಷಕರ ಕಛೇರಿಯನ್ನೇ ಪೂರ್ಣ ಮಟ್ಟದ ಕಛೇರಿಯನ್ನಾಗಿ ಮಾಡಲು ಅಲ್ಲಿಗೆ ಎರಡು ಪೂರ್ಣ ಮಟ್ಟದ ಕಛೇರಿಯನ್ನಾಗಿ ಮಾಡಿದರೆ ಬಹಳ ಒಳ್ಳೆಯದು. ಪಾಂಡವಪುರದಲ್ಲಿ ಸಹಕಾರಿ ಕಾರ್ಖಾನೆ ಇದ್ದು ಅಲ್ಲಿ ಹೆಚ್ಚಿನ ಜನದಟ್ಟಣೆ ಮತ್ತು ವಾಹನ ಸಂಚಾರದ ದಟ್ಟಣೆ ಕೂಡ ಇರುವುದರಿಂದ ಇದನ್ನು ಕೆಟ್ರೋಲ್ ಮಾಡಲು ಅಲ್ಲಿಗೆ ಎರಡು ಪೂರ್ಣ ಮಟ್ಟದ ಪೋಲಿಸ್ ಸ್ಟೇಷನ್‌ಗಳನ್ನು ಕೊಟ್ಟು ಈ ತಾಲೂಕನ್ನು ಸ್ವತಂತ್ರ ವೃತ್ತದ ಅಧೀನಕ್ಕೆ ಒಳಪಡಿಸುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಗೊತ್ತಿರುವ ಪ್ರಕಾರ ಪಾಂಡುಪುರ ತಾಲೂಕಿನಲ್ಲಿ 179 ಹಳ್ಳಿಗಳಿದ್ದು ಅವುಗಳ ಪೈಕಿ 150 ಹಳ್ಳಿಗಳು ಪಾಂಡುಪುರ ಪೋಲೀಸ್ ಸ್ಟೇಷನ್ ವ್ಯಾಪ್ತಿಗೂ 18 ಹಳ್ಳಿಗಳು ಕೆ.ಆರ್. ಸಾಗರ ಪೋಲಿಸ್ ಸ್ಟೇಷನ್ ವ್ಯಾಪ್ತಿಗೂ, ಉಳಿದ 13 ಹಳ್ಳಿಗಳು ಶ್ರೀ ರಂಗಪಟ್ಟಣ ಪೋಲಿಸ್ ಸ್ಟೇಷನ್ ವ್ಯಾಪ್ತಿಗೂ ಸೇರಿವೆ. ಇತ್ತೀಚೆಗೆ ಪಾಂಡುಪುರ ಪೋಲಿಸ್ ಠಾಣೆಯನ್ನು ಮೇಲ್ದರ್ಜೆಗೆ ಏರಿಸಿ ಅಲ್ಲಿ ಒಬ್ಬ ಪೋಲಿಸ್ ಇನ್‌ಸ್ಪೆಕ್ಟರನ್ನೋ ಠಾಣಾಧಿಕಾರಿಯನ್ನಾಗಿ ನೇಮಿಸಿದ್ದೇವೆ. ಪಾಂಡುಪುರ ತಾಲೂಕಿನಲ್ಲಿ ಒಂದೇ ಪೋಲೀಸ್ ಸ್ಟೇಷನ್ ಇದ್ದರೂ ಅಲ್ಲಿಗೆ ಒಬ್ಬ ಇನ್‌ಸ್ಪೆಕ್ಟರ್‌ನ್ನು ನೇಮಕ ಮಾಡಿರುವುದರಿಂದ ಒಬ್ಬ ಇನ್‌ಸ್ಪೆಕ್ಟರನ್ನು ಸೂಪರ್‌ವೈಸ್ ಮಾಡುವುದಕ್ಕೆ ಇನ್ನೊಬ್ಬ ವೃತ್ತ ಇನ್ಸ್‌ಪೆಕ್ಟರ್‌ನ್ನು ನೇಮಕ ಮಾಡಬೇಕೆಂದು ಕೇಳುವುದರಲ್ಲಿ ಅರ್ಥವಿಲ್ಲ. ಇನ್ನೂ ಒಂದೆರಡು ಪೋಲೀಸ್ ಸ್ಟೇಷನ್ಸ್ ಇದ್ದಿದ್ದರಿಂದ ಒಬ್ಬ ವೃತ್ತ ಠಾಣಾಧಿಕಾರಿಯನ್ನು ನೇಮಕ ಮಾಡಬಹುದಿತ್ತು. ಒಬ್ಬ ಇನ್ಸ್‌ಪೆಕ್ಟರ್ ಮೇಲೆ ಪುನಃ ಇನ್ನೊಬ್ಬ ಇನ್ಸ್‌ಪೆಕ್ಟರ್ ಸೂಪರ್‌ವೈಸ್ ಮಾಡಲಿಕ್ಕೆ ಬರುವುದಿಲ್ಲ. ಈ ಒಂದು ಕಾರಣದಿಂದಾಗಿ ನಾವು ಇದನ್ನು ಒಪ್ಪಿಲ್ಲ ಎಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಡಿ. ಹಲಗೇಗೌಡ :- ಆದುದರಿಂದಲೇ ನಾನು ಹೇಳುತ್ತಿರುವುದು, ಪಾಂಡುಪುರ ತಾಲೂಕಿನ

ಹಳ್ಳಿಗಳನ್ನು ಬೇರೆ ತಾಲೂಕಿನ ಪೋಲಿಸ್ ಸ್ಟೇಷನ್‌ಗೆ ಸೇರಿಸುವುದಕ್ಕೆ ಬದಲು ನಮ್ಮ ಪಾಂಡುಪುರ ತಾಲೂಕಿನಲ್ಲೇ ಇನ್ನೊಂದು ಸಬ್ ಇನ್‌ಸ್ಪೆಕ್ಟರ್ ಇರತಕ್ಕ ಪೋಲಿಸ್ ಸ್ಟೇಷನ್‌ನ್ನು ಮಾಡಿ ಅದನ್ನೇ ಒಂದು ಪೂರ್ಣ ಮಟ್ಟದ ವೃತ್ತವನ್ನಾಗಿ ಏತಕ್ಕೆ ಮಾಡಬಾರದು? ನಾವು ಬೇರೆ ಬೇರೆ ತಾಲೂಕುಗಳಿಗೆ ಏತಕ್ಕೆ ಹೋಗಬೇಕು?

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಸದಸ್ಯರ ಸಲಹೆ ಭೌತಿಕವಾಗಿ ಒಳ್ಳೆಯ ಸಲಹೆ. ಆದರೆ ಐತಿಹಾಸಿಕವಾಗಿ ಸೌಹಾರ್ದ ದೃಷ್ಟಿಯಿಂದ ಶ್ರೀರಂಗಪಟ್ಟಣದ ಜೊತೆ ತಮ್ಮ ಸಂಬಂಧ ಯಾವಾಗಲೂ ಉಳಿದುಕೊಂಡು ಹೋಗಬೇಕೆಂಬ ಉದ್ದೇಶದಿಂದ ಈ ರೀತಿ ಮಾಡಿರಬೇಕು. ಇದನ್ನು ವಿಚಾರ ಮಾಡೋಣ.

ಶ್ರೀಮತಿ ದಮಯಂತಿ ಬೋರೇಗೌಡ :- ಶ್ರೀ ರಂಗಪಟ್ಟಣ ತಾಲ್ಲೂಕಿಗೆ ಕೆಲವು ಹಳ್ಳಿಗಳನ್ನು ಸೇರಿಸಿದ್ದೀರಿ. ಆದರೆ ಶ್ರೀ ರಂಗಪಟ್ಟಣದ ತಾಲ್ಲೂಕಿನ ಪೋಲೀಸ್ ಸ್ಟೇಷನ್ ಜಾಸ್ತಿ ಕೆಲಸವಿದೆ. ನಿಮ್ಮ ಸರ್ಕಾರದಿಂದ ಯಾವುದೇ ಒಂದು ಸಹಾಯ ಸಿಕ್ಕದೆಹೋದರೂ ಅದು ಟ್ಯೂರಿಸ್ಟ್ ಸೆಂಟರ್ ಆಗಿರುವುದರಿಂದ ಪ್ರೋಟೊ ಕಾರೆಗೆನೇ ಸಾಕಷ್ಟು ಜನ ನಿಂತುಕೊಳ್ಳುತ್ತಾರೆ. ಅವರಿಗೆ ರಸ್ತೆ ಕಾಯುವ ಕೆಲಸವೇ ಆಗಿದೆ. ಅದ್ದರಿಂದ ಶ್ರೀ ರಂಗಪಟ್ಟಣದ ಪೋಲೀಸ್ ಸ್ಟೇಷನ್‌ನಲ್ಲಿ ಎಷ್ಟೋಸಾರಿ ಜವಾಬ್ದಾರಿಯುತ ಆಫೀಸರ್ಸ್ ಇರುವುದಿಲ್ಲ, ಅದಕ್ಕೆ ಏನು ಮಾಡುತ್ತೀರಿ ?

ಶ್ರೀ ಎಂ. ವೀರಪ್ಪ ಮೊಯಿಲಿ :- ಶ್ರೀ ರಂಗಪಟ್ಟಣ ಮತ್ತು ಪಾಂಡವಪುರದ ಮಧ್ಯೆ ಇರುವ ಸಂಬಂಧವನ್ನು ಕಡಿಯಬಾರದೆನ್ನುವುದು ನಮ್ಮ ಉದ್ದೇಶ. ಆದರೆ ಇದು ಬೇರೆ ಬೇರೆಯಾಗಬೇಕೆಂದು ತಮ್ಮ ಉದ್ದೇಶವಾದರೆ ಅದರ ಬಗ್ಗೆ ಸಮಗ್ರವಾದ ಚಿಂತನೆ ಮಾದಬೇಕಾಗುತ್ತದೆ. ಆದ್ದರಿಂದ ನಾವು ಆದರ ಬಗ್ಗೆ ಅಲೋಚನೆ ಮಾಡುತ್ತೇವೆ.

ಅರಸೀಕೆರೆ ತಾಲ್ಲೂಕು ಜಾವಗಲ್‌ಗೆ ಪೋಲೀಸ್ ಠಾಣೆ ಮಂಜೂರಾತಿ.

292 (1753) ಶ್ರೀ ಬೇ. ಶಿವರಾಮು (ಗಂಡಸಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸವರೆ :-

ಅ) ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕು ಜಾಮಗಲ್ ಹೋಬಳಿ ಜಾವಗಲ್‌ಗೆ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಠಾಣೆ ಮಂಜೂರಾತಿಗೆ ಜಿಲ್ಲಾ ಪೋಲೀಸ್ ಅಧಿಕಾರಿಗಳ ಕಛೇರಿಯಿಂದ ಸರ್ಕಾರಕ್ಕೆ ಪ್ರಸ್ತಾವನೆ ಶಿಪಾರಸ್ಸು ಬಂದಿದೆಯೇ ?

ಆ) ಸರ್ಕಾರವು ಯಾವ ಆದ್ಯತೆಯ ಮೇಲೆ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ಠಾಣೆಗೆ ಮಂಜೂರಾತಿ ಕೊಡುತ್ತಿದೆ ?

ಇ) ಆಧ್ಯತೆಯ ವ್ಯಾಪ್ತಿಯಲ್ಲಿ ಜಾವಗಲ್ ಬರುತ್ತದೆಯೇ ?

ಈ) ಬರುವುದಾದರೆ ಯಾವಾಗ ಮಂಜಾರಾತಿ ನೀಡಲು ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಇಲ್ಲ

ಆ) ಪ್ರಸ್ತುತ ಇರುವ ಠಾಣೆಯ ವಿಸ್ತೀರ್ಣ ಜನಸಂಖ್ಯೆ ವರದಿಯಾದ ಅಪರಾಧ ಪ್ರಕರಣಗಳು ಇತರೇ ಅಂಶಗಳಾದ ಕೋಮು ಗಲಭೆ ಕಾರ್ಮಿಕ ಹಾಗೂ ವಿದ್ಯಾರ್ಥಿ ಸಮಸ್ಯೆಗಳು,